2) 2000-01ನೇ ಸಾಲಿನಲ್ಲಿ ಅಯ್ದ 112.70 ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಯ ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 1242 ಲಕ್ಷಗಳಿಗೆ ಅಂದಾಜು ಮಂಜೂರಾಗಿದ್ದು, ತುಮಕೂರು ಉಪ ವಿಭಾಗದ ವ್ಯಾಪ್ತಿಯಲ್ಲಿನ 8.00 ಕಿ.ಮೀ. (83-91) ಕಾಮಗಾರಿ ಮಾತ್ರ ಬಾಕಿ ಇರುತ್ತದೆ. ಉಳಿದ ಎಲ್ಲಾ ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗಿದೆ.

3) 2001-02ನೇ ಸಾಲಿನಲ್ಲಿ ಇದುವರೆಗೆ 26.ಕಿ.ಮೀ. ವಾಹನ ಸಂಚಾರ ಪಥದ ಅಭಿವೃದ್ಧಿಗೆ ರೂ. 519.54 ಲಕ್ಷಗಳ ಅಂದಾಜು ಮಂಜೂರಾಗಿದ್ದು, ದಿನಾಂಕ 31-3-2002 ರೊಳಗೆ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ.

ಇ) ತುಮಕೂರು -ಹೊನ್ನಾವರ ಹೆದ್ದಾರಿಯ ಪರಿವರ್ತನಾ ಕಾರ್ಯಕ್ಕೆ ಅಂದರೆ ದ್ವಿಪಥಗೊಳಿಸುವ ಯಾವುದೇ ಕಾಮಗಾರಿಗಳು ಕೇಂದ್ರ ಸರ್ಕಾರದಿಂದ ಸಧ್ಯಕ್ಕೆ ಮಂಜೂರಾಗಿರುವುದಿಲ್ಲ.

ಗೌರಿಬಿದನೂರು ತಾಲ್ಲೂಕಿನಲ್ಲಿ ಒತ್ತುವರಿಯಾಗಿರುವ ಅರಣ್ಯ ಪ್ರದೇಶಗಳು.

2282 (2714) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿ ಒತ್ತುವರಿಯಾಗಿರುವ ಅರಣ್ಯ ಭೂಮಿ ವಿಸ್ತೀರ್ಣವೆಷ್ಟು? ಈ ಒತ್ತುವರಿದಾರರ ವಿರುದ್ಧ ಸರ್ಕಾರವು ಕೈಗೊಂಡಿರುವ ಕ್ರಮವೇನು? ಹಾಗೂ ಒತ್ತುವರಿ ಭೂಮಿಯಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವೆಷ್ಟು? ವಿವರ ನೀಡುವುದು.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

1. ಗೌರಿಬಿದನೂರು ತಾಲ್ಲೂಕಿನಲ್ಲಿ 38.87 ಹೆಕ್ಟೇರ್ ಅರಣ್ಯ ಭೂಮಿ ಒತ್ತುವರಿಯಾಗಿರುತ್ತದೆ.

ಒತ್ತುವರಿಯಾದ 38.87 ಹೆಕ್ಟೇರ್ ಅರಣ್ಯ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ನೆಡತೋಪುಗಳನ್ನು ಬೆಳೆಸಲಾಗಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಷ್ಟ್ರದಲ್ಲಿ ಗಿಡ ನೆಡುವ ಕಾರ್ಯಕ್ರಮಗಳಿಗೆ ಸರ್ಕಾರೇತರ ಸಂಸ್ಥೆಗಳಿಗೆ ಅನುದಾನ ನೀಡುವ ಬಗ್ಗೆ.

2294(3238) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ರಾಜ್ಯದಲ್ಲಿ ಸರ್ಕಾರವು ಹಮ್ಮಿಕೊಳ್ಳುವ ಗಿಡ ನೆಡುವ ಕಾರ್ಯಕ್ರಮಕ್ಕೆ ವಿವಿಧ ಸರ್ಕಾರೇತರ ಸಂಸ್ಥೆಗಳು (ಎನ್.ಜಿ.ಓ.) ಮತ್ತು ಸಂಘ ಸಂಸ್ಥೆಗಳು ಸಹಕಾರ ನೀಡಲು ಮುಂದೆ ಬಂದಿವೆಯೇ? ಬಂದಿದ್ದಲ್ಲಿ ಅವುಗಳ ವಿವರಗಳನ್ನು ಕೊಡುವುದು.

ಅ) ಈ ಸಂಘ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನವನ್ನು ಕೊಡಲಾಗುತ್ತದೆಯೇ? ಕೊಡದಿದ್ದಲ್ಲಿ, ಯಾವಾಗ ಕೊಡಲಾಗುವುದು (ವಿವರಗಳನ್ನು ಕೊಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು) :—

ಅ) ಹೌದು.

ಪ್ರಸ್ತುತ ಸಾಲಿನಲ್ಲಿ "ವನವಿಕಾಸ ಯೋಜನೆ" ಒಂಬ ಯೋಜನೆಯನ್ನು ಸರ್ಕಾರವು 11-7-2001ರಂದು ಮಂಜೂರು ಮಾಡಿದ್ದು ಈ ಯೋಜನೆಯ ಅನ್ವಯ ಕಾರ್ಯಕ್ರಮಗಳನ್ನು ಕೈಗೊಳ್ಳಲು 'ವನ ಸಂವರ್ಧನ ಟ್ರಸ್ಟ್' ಎಂಬ ಧಾರ್ಮಿಕ ಸಂಸ್ಥೆಯು ಮುಂದೆ ಬಂದಿರುತ್ತದೆ.

ಅ) ಕೊಡಲಾಗುವುದು

ಇ) ಉದ್ಭವಿಸುವುದಿಲ್ಲ

ಕೇಂದ್ರ ಸರ್ಕಾರದಿಂದ ಸಿ.ಆರ್.ಎಫ್ ನಲ್ಲಿ ಬಿಡುಗಡೆಯಾದ ಹಣ.

2285(3229) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000-01 ಮತ್ತು 2001-02ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಿ.ಆರ್.ಎಫ್.ನಲ್ಲಿ ಬಿಡುಗಡೆಯಾಗಿರುವ ಹಣ ಎಷ್ಟು?

ಆ) ಎಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ? (ಜಿಲ್ಲಾವಾರು ವಿವರಗಳನ್ನು ಕೊಡುವುದು?.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಕೇಂದ್ರ ಸರ್ಕಾರದಿಂದ 2000-01ನೇ ಸಾಲಿನಲ್ಲಿ 2149.00 ಲಕ್ಷ ರೂ.ಗಳು ಬಿಡುಗಡೆಯಾಗಿರುತ್ತದೆ. ಮತ್ತು 2001-02ನೇ ಸಾಲಿನಲ್ಲಿ ಇನ್ನೂ ಹಣ ಬಿಡುಗಡೆಯಾಗಿರುವುದಿಲ್ಲ.

ಆ) ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಈಗಾಗಲೇ 33 ಕಾಮಗಾರಿಗಳು ಅನುಮೋದನೆ ಆಗಿದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.